# ಕಣ್ಣು ತೆರೆಯಲಿ

ಎಂಥ ಸಮಾಜದಲ್ಲಿ ಬದುಕುತಿದ್ದೇವೆ! ನಾವೇ ಕಟ್ಟಿದ, ಕಟ್ಟುತ್ತಿರುವ, ನಾವೇ ಉತ್ತರಾಧಿಕಾರಿಗಳಾಗಿರುವ, ನಾವೇ ಹೊಣೆಗಾರರೂ ಆಗಿರುವ, ನಮ್ಮದೇ ಸಮಾಜವಿದು! ಧೀಮಂತೆ, ದಿಟ್ಟೆ ಪತ್ರಕರ್ತೆ ಹತ್ಯೆಯಾಗಿದ್ದಾರೆ! ಅವರು ತಮ್ಮ ವಿಚಾರಗಳಿಗಾಗಿಯೇ ಹತ್ಯೆಯಾಗಿದ್ದಾರೆ. ತಮ್ಮ ವಿಚಾರಗಳನ್ನು ದಿಟ್ಟವಾಗಿ ಬಹಿರಂಗಗೊಳಿಸುತ್ತಿದ್ದುದರಿಂದಲೇ ಹತ್ಯೆಯಾಗಿದ್ದಾರೆ. ಇದು ಆಘಾತಕಾರಿ.

ಅತ್ಯಾಚಾರ, ಕೊಲೆ, ಹಿಂಸೆಗಳು 'ಕರ್ಮ'ದ ನರಕವಾದರೆ ಮತಾಂಧತೆಯು 'ಜ್ಞಾ'ದ ನರಕವಾಗಿದೆ. ನಾಗರಿಕ ಕಾನೂನುಗಳನ್ನು ಬಿಗಿಗೊಳಿಸಿ ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಅತ್ಯಾಚಾರ– ಕೊಲೆಗಳನ್ನು ಸ್ವಲ್ಪಮಟ್ಟಿಗಾದರೂ ನಿಯಂತ್ರಣ ಮಾಡಬಹುದೆಂಬ ಆಸೆಯಾದರೂ ಇದೆ– ನಿಃಶ್ಯೇಷ ಮಾಡಲಾಗದಿದ್ದರೂ. ಅಥವಾ ತುಸು ದಕ್ಷತೆಯಿಂದ ಕಾರ್ಯ ನಿರ್ವಹಿಸಿದರೆ ಅಪರಾಧಿಗಳಿಗೆ ಶಿಕ್ಷೆಯನ್ನಾದರೂ ವಿಧಿಸಬಹುದು. ಆದರೆ ಮತಾಂಧತೆಯನ್ನು ನಿಯಂತ್ರಿಸುವುದು ಹೇಗೆ? ಜ್ಞಾನದ ಕೇಡನ್ನು ನಿಯಂತ್ರಿಸುವುದು ಹೇಗೆ? ಭಿನ್ನ ವಿಚಾರಗಳನ್ನು ಪ್ರತಿಪಾದಿಸುವ ಮೂಲಕವಲ್ಲದೆ?

ಇಲ್ಲೊಂದು ಸೂಕ್ಷ್ಮವಿದೆ. ಕ್ರಿಯೆಗೆ ಒಂದು ಪ್ರತಿಕ್ರಿಯೆ ಇದ್ದೇ ಇರುತ್ತದಲ್ಲವೆ? ವಿಚಾರಕ್ಕೆ ಇನ್ನೊಂದು ಪ್ರತಿ ವಿಚಾರ ಇದ್ದಂತೆ. ಆದರೆ ಕ್ರಿಯೆ– ಪ್ರತಿಕ್ರಿಯೆಗಳು ಒಂದೇ ಮಟ್ಟದವು, ಒಂದೇ ರೂಪದವು ಆಗಿರುತ್ತವೆ. ಹಿಂಸೆಗೆ ಹಿಂಸೆ, ಕಣ್ಣಿಗೆ ಕಣ್ಣು, ಕೊಲೆಗೆ ಕೊಲೆ ಎಂಬೀ ರೀತಿಯ ಪ್ರತಿಕ್ರಿಯೆಗಳು ಸಮಾನ ಸ್ವರೂಪದವು. ಭಿನ್ನ ಸ್ವರೂಪದವು ಅಲ್ಲ. ನಿಜಕ್ಕೂ ಪ್ರತಿ–ರೂಪಗಳು. ಪಡಿಯಚ್ಚುಗಳು. ಆದರೆ ವಿಚಾರದಲ್ಲಿ ಯಾದರೋ ಯಾವುದೋ ಒಂದು ವಿಚಾರಕ್ಕೆ ಭಿನ್ನ ವಿಚಾರವು ಹುಟ್ಟಿಕೊಂಡರೆ ಅದು ಮೊದಲ ವಿಚಾರದ ಪಡಿಯಚ್ಚು ಅಲ್ಲ! ಆಗಬೇಕಿಲ್ಲ. ವೇದವನ್ನು ಪ್ರಮಾಣವೆಂದು ಒಪ್ಪಲಾರೆನೆನ್ನುವ ಬುದ್ಧನ ವಿಚಾರವಾದವು ವೇದ ಪ್ರಾಮಾಣ್ಯವಾದದ ಪಡಿಯಚ್ಚಾಗುವುದು ಸಾಧ್ಯವಿಲ್ಲವಲ್ಲ. ಅರಿವಿನ ಕ್ಷೇತ್ರವೇ ಆದರೂ, ಬುದ್ಧನು ವಿಚಾರ ಮಾಡು ಮಾರ್ಗವೇ ಭಿನ್ನವಾಗಿದೆ. ಪೂರ್ತಿಯಾಗಿ ಬೇರೆಯಾಗಿದೆ. ನಿಜಕ್ಕಾದರೆ 'ಅದುಬೇರೆ' ಎಂದು ಗುರುತಿಸುವ ಮಾತು, ಅದು ಎಲ್ಲರಂತಲ್ಲ ಎನ್ನುವ ಅರ್ಥವನ್ನು ಕೊಡುತ್ತ, ದೊಡ್ಡ ಹೊಗಳಿಕೆಯ ಮಾತಾಗಿದೆ– ನಮ್ಮಲ್ಲಿ! ಈ ಒಂದು ಅಂಶವನ್ನು ನಾವು ಆಳವಾಗಿ ಮನವರಿಕೆ ಮಾಡಿಕೊಳ್ಳಬೇಕಾಗಿದೆ. ಭಿನ್ನ ವಿಚಾರವು, ಒಂದರಂತೆ ಇನ್ನೊಂದಾಗದೆ, ಪಡಿಯಚ್ಚಾಗದೆ ನಿಜಕ್ಕೂ ಭಿನ್ನವಾಗಿರುವ ವಿಚಾರವು ಬೆರಗಿಗೆ ಕಾರಣವಾಗಿ ಅತ್ಯಂತ ಗೌರವಾರ್ಹವಾಗಿದೆ ನಮ್ಮಲ್ಲಿ ಎಂಬ ಅಂಶವನ್ನು. ಆದುದರಿಂದಲೇ ಭಿನ್ನ ವಿಚಾರವನ್ನು ಹತ್ತಿಕ್ಕುವುದು ಅತ್ಯಂತ ಹೇಯವಾದ ಸಂಗತಿಯಾಗಿದೆ.

'ಕರ್ಮ'ವನ್ನು ಜ್ಞಾನದ ಈ ಮಟ್ಟಕ್ಕೆ ಏರಿಸುವುದು ಹೇಗೆ ಎಂದು ಗಾಂಧೀಜಿ ಬದುಕಿನುದ್ದಕ್ಕೆ ಪ್ರಯತ್ನಿಸಿದರು. ಅಂದರೆ ಕ್ರಿಯೆ– ಪ್ರತಿಕ್ರಿಯೆಗಳ ಏಕಾಕಾರದ ಪಡಿಯಚ್ಚಿನಂತಿರುವ ಸರಪಳಿಯನ್ನು ಮುರಿದು ಪ್ರತಿಕ್ರಿಯೆಯನ್ನು 'ಭಿನ್ನ'ವಾಗಿಸುವುದು ಹೇಗೆ ಎಂದು ಚಿಂತಿಸಿದರು. ಹಾಗೆ ರೂಪುಗೊಂಡದ್ದು 'ಸತ್ಯಾಗ್ರಹ' ಎಂಬ ಅಪೂರ್ವ ಪರಿಕಲ್ಪನೆ. ಸತ್ಯಾಗ್ರಹವು ಹಿಂಸೆಗೆ, ಅಸತ್ಯಕ್ಕೆ ಪ್ರತಿಕ್ರಿಯೆ ಹೌದು. ಆದರೆ ಅವುಗಳ ಪಡಿಯಚ್ಚಲ್ಲ. ಹಿಂಸೆಯೇ ಈ ಅನಿರೀಕ್ಷಿತ ಕ್ರಿಯೆಯನ್ನು ಕಂಡು ತನ್ನಂತಿಲ್ಲದ ಇದಕ್ಕೆ ಹೇಗೆ ಪ್ರತಿಕ್ರಿಯೆ ಮಾಡಬೇಕೆಂದು ತನ್ನಲ್ಲೇ ಗೊಂದಲಕ್ಕೆ ಒಳಗಾಗುವಂತೆ ಮಾಡುವ ಮಾದರಿ ಇದು! ತಾನು ತಪ್ಪು ಮಾಡಿದ್ದೇನೆಯೇ ಎಂದು ಆತ್ಮ ನಿರೀಕ್ಷೆ ಮಾಡಿಕೊಳ್ಳುವಂತೆ ಅಂದರೆ ತನ್ನ ಉದ್ರೇಕದ ಸ್ವಭಾವವನ್ನೇ ಬದಲಿಸಿಕೊಳ್ಳುವಂತೆ ಹಿಂಸೆಯನ್ನೇ ಒತ್ತಾಯಿಸುವ ಮಾದರಿ ಇದು!

ಈ ಮಾದರಿಯಲ್ಲಿ ದೋಷಗಳಿಲ್ಲವೇ? ಇದು ವ್ಯಾವಹಾರಿಕವೇ? ಇತ್ಯಾದಿ ಚರ್ಚೆಗಳಿಗಿಂತ ಈಗ ನಾವು ಯಾವ ಹಂತದಲ್ಲಿದೇವೆ ಎಂದು ಮೊದಲು ಯೋಚಿಸಬೇಕಾಗಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕಾಲದಲ್ಲಿ ಗಾಂಧೀಜಿಯವರ ಆಳವಾದ ಚಿಂತನೆಯಿಂದ ಹುಟ್ಟಿಕೊಂಡ ಸತ್ಯಾಗ್ರಹ ಎಂಬ ಪರಿಕಲ್ಪನೆ ಪ್ರಜಾಪ್ರಭುತ್ವಕ್ಕೆ ಹೇಳಿಮಾಡಿಸಿದ ಮಾದರಿಯಾಗಿತ್ತು. ಆದರೆ ಈ ದೇಶದಲ್ಲಿ ಇಂದು ಪ್ರಜಾಪ್ರಭುತ್ವ ಹೇಗಿದೆ ಎಂದು ಗಮನಿಸಿದರೆ ಆಘಾತವಾಗುತ್ತದೆ.

ಇಂದು ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಹೇಳುತ್ತಿದೆ: ಕಾಂಗ್ರೆಸ್ ಮುಕ್ತ ಭಾರತ ತಮ್ಮ ಗುರಿ ಎಂದು. ಕಾಂಗ್ರೆಸ್ ಪ್ರತಿಪಕ್ಷವಾಗಿದೆ. ಪ್ರತಿಪಕ್ಷವೇ ಇರಕೂಡದು ಎಂದು ಈ ಮಾತಿನ ಅರ್ಥವೇ? ಏನಿದು ದುರ್ಭಾಷೆ? ಪ್ರಜಾಪ್ರಭುತ್ವಕ್ಕೆ ಹೊಂದುವ ನುಡಿಗಟ್ಟೇ ಇದು? ಈ ದೇಶದಲ್ಲಿ ಅಸಹಿಷ್ಣುತೆ ಇದೆ ಎಂಬ ಮಾತು ಬಂದಾಗ ಸಿಕ್ಕಾಪಟ್ಟೆ ಸಿಟ್ಟಾದವರು ತಾವೇ ಏಕೆ ಅಸಹಿಷ್ಣು ಮಾತುಗಳನ್ನಾಡುತ್ತಿದ್ದಾರೆ? ಬಿಜೆಪಿ ವಿಪಕ್ಷವಾಗಿದ್ದಾಗಲೂ ಇಂಥ ಮಾತುಗಳನ್ನಾಡಬಾರದು. ಅಂಥಲ್ಲಿ, ದೊಡ್ಡ ಬಹುಮತದೊಂದಿಗೆ ಅಧಿಕಾರ ನಡೆಸುತ್ತಿರುವ ಕಾಲದಲ್ಲೂ ಇಂಥ ಮಾತುಗಳೆ? ಕಾಂಗ್ರೆಸ್ ತಪ್ಪು ಮಾಡಿಲ್ಲವೇ ಎನ್ನುವ ಚರ್ಚೆ ಅಪ್ರಸ್ತುತ. ಜನ, ಕಾಂಗ್ರೆಸ್ ಅನ್ನು ಚುನಾವಣೆಯಲ್ಲಿ ಸೋಲಿಸಿದ್ದೇ ಅದರ ತಪ್ಪಿಗೆ ಆದ ಶಿಕ್ಷೆಯಲ್ಲವೇ? ಕಾಂಗ್ರೆಸ್ ಮುಕ್ತ ಭಾರತ ಎನ್ನುವಾಗ ಯಾವುದೇ ಭಿನ್ನಾಭಿಪ್ರಾಯಗಳನ್ನು ಸಹಿಸುವುದಿಲ್ಲ ಎಂಬರ್ಥ ಹೊರಡುತ್ತದೆ. ಇದು ಭಾರತೀಯ ಸಂಸ್ಕೃತಿಯೇ ಅಲ್ಲ.

ಈಗ ಪಕ್ಷಗಳ ಕಾಲ. ಪ್ರಜೆಗಳ ಕಾಲವಲ್ಲ. ಪ್ರತಿಯೊಂದು ಪಕ್ಷಗಳೂ 'ಹೈಕಮಾಂಡ್' ಎನ್ನುವ ಪದವನ್ನು ಅತಿಗೌರವದಿಂದಲೆಂಬಂತೆ ಉಚ್ಚರಿಸುತ್ತವೆ. ಈ ಪದವೇ ಅಪ್ರಜಾಸತ್ತಾತ್ಮಕವಾದುದು. ರಾಜಸತ್ತೆಯನ್ನು ನೆನಪಿಸುವ ಪದವಿದು. 'ಹೈಕಮಾಂಡ್' ಎನ್ನುತ್ತಾರೆ. ಪೀಪಲ್ಸ್ ಕಮಾಂಡ್ ಎಂದು ಅಪ್ಪಿತಪ್ಪಿಯೂ ಹೇಳುವುದಿಲ್ಲ. ಕೆಲ ವರ್ಷಗಳ ಹಿಂದೆ ಒಬ್ಬರು ದೊಡ್ಡ ಮನುಷ್ಯರು ಹೇಳಿದ್ದರು: ಪಕ್ಷವು ಕತ್ತೆಯೊಂದನ್ನು ಚುನಾವಣೆಗೆ ನಿಲ್ಲಿಸಿದರೂ ಕಾರ್ಯಕರ್ತರು ದುಡಿದು ಅದನ್ನು ಗೆಲ್ಲಿಸಬೇಕು, ಅಂಥವರೇ ನಿಜವಾದ ಕಾರ್ಯಕರ್ತರು ಎಂದು. ಈ ಮಾತಿಗೆ ಕಮೆಂಟ್ ಮಾಡಬೇಕಿಲ್ಲ. ಪಕ್ಷವು ಏನು ಮಾಡಿದರೂ ಸರಿ ಎನ್ನುವುದು ಈ ಮಾತಿನ ಮೊದಲ ತಾತ್ಪರ್ಯ. ನಾವು ಹೇಳಿದಷ್ಟು ಮಾಡಿ, ನಿಮ್ಮ ತಲೆ ಉಪಯೋಗಿಸಬೇಡಿ ಎಂದು ಕಾರ್ಯಕರ್ತರಿಗೆ ಸಂದೇಶ ಎನ್ನುವುದು ಎರಡನೇಯ ತಾತ್ಪರ್ಯ. ಓಟು ಹಾಕುವ ಜನ ಕತ್ತೆಗಳಿಗೂ ಓಟು ಹಾಕಬಲ್ಲರೆಂದು ಜನರನ್ನು ಅಳತೆಮಾಡಿದ್ದು ಮೂರನೇಯ ತಾತ್ಪರ್ಯ. ಇವೆಲ್ಲ ಎಲ್ಲಿಗೆ ಮುಟ್ಟಬಹುದು ಎಂದು ಯಾರಾದರೂ ಆಲೋಚಿಸುತ್ತಾರೆಯೇ? ಜನರ ಸ್ವತಂತ್ರ ವ್ಯಕ್ತಿತ್ವಗಳನ್ನೇ ನಾಶ ಮಾಡುವುದು ಯಾವ ಸಂಸ್ಕೃತಿ?

ನಮ್ಮ ನಮ್ಮ ಪಕ್ಷದ ಕುರಿತಾದ ಇಂಥ ಕುರುಡು ನಿಷ್ಠೆ ಹೀಗೆ ಅಬಾಧಿತವಾಗಿ ಬೆಳೆಯಲು ನಮ್ಮ ಜಾತಿ, ನಮ್ಮ ಮತ, ನಮ್ಮ ವಿಚಾರಧಾರೆಗಳ ಕುರಿತಾದ ನಮ್ಮ ಕುರುಡು ನಿಷ್ಠೆಗಳೇ ಕಾರಣ. ಸ್ವ ವಿಮರ್ಶೆಯೇ ಇಲ್ಲದ ಇಂಥ ಕುರುಡು ನಿಷ್ಠೆಯು ಭಿನ್ನಾಭಿಪ್ರಾಯಗಳನ್ನು ಎಳ್ಳಷ್ಟೂ ಸಹಿಸಲಾರದು. ಯಾವ ಮಟ್ಟಕ್ಕಾದರೂ ಹೋಗಿ ಭಿನ್ನಾಭಿಪ್ರಾಯಗಳನ್ನು ಹತ್ತಿಕ್ಕುವುದು– ಹತ್ಯೆಯ ಮಟ್ಟಕ್ಕಾದರೂ. ಮನೆಯ ಮಕ್ಕಳನ್ನೇ ಮರ್ಯಾದಾ ಹತ್ಯೆ ಮಾಡುವ ಸನ್ನಿವೇಶವಿರುವಲ್ಲಿ ಇನ್ನು ರಾಜಕೀಯ, ಸಾಮಾಜಿಕ ಪ್ರಶ್ನೆಗಳ ಕುರಿತಾದ ಭಿನ್ನಮತೀಯರ ಪಾಡೇನು?

ಆಕ್ಟಿವಿಸ್ಟ್ ಲೇಖಕನೊಬ್ಬ ಹೇಳಿದ ಮಾತು ನೆನಪಾಗುತ್ತದೆ. ನಾನು ನಂಬಿದ ಗುರಿಗಾಗಿ ಜೀವವನ್ನು ಬೇಕಾದರೆ ಮುಡಿಪು ಮಾಡುತ್ತೇನೆ. ಆದರೆ ನನ್ನ ಕಣ್ಣುಗಳನ್ನಲ್ಲ– ಎಂದಿದ್ದ ಆತ. ಅಂದರೆ ನಂಬಿದ ಗುರಿ ಶ್ರೇಷ್ಠವಿರಬಹುದಾದರು ಆ ಗುರಿ ಸಾಧನೆಯ ಹೆಸರಲ್ಲಿ ಏನೆಲ್ಲ ನಡೆಯುತ್ತಿದೆ ಅದೆಲ್ಲವನ್ನೂ ಕಣ್ಣುಮುಚ್ಚಿ ಒಪ್ಪಿಕೊಳ್ಳಲಾಗದು ಎಂದಿದ್ದ. ಪತ್ರಕರ್ತೆ ಗೌರಿ ಲಂಕೇಶ್ ನಿಜಕ್ಕೂ ಕಣ್ಣುಮುಚ್ಚಿಲ್ಲ. ಅವರು ಎಲ್ಲ ಅರ್ಥದಲ್ಲೂ ನೇತ್ರದಾನ ಮಾಡಿದ್ದಾರೆ. ಏನೆಲ್ಲ ನಡೆಯುತ್ತಿದೆ ಎಂದು ನೋಡುತ್ತಲೇ ಇದ್ದಾರೆ. ಇದು ನಮ್ಮ ಕಣ್ಣು ತೆರೆಯಿಸಲಿ.

■ ತೋಷ

## ಮಾತೇ ಮುತ್ತು

★ ನಿಮ್ಮ ಪ್ರತಿಷ್ಠೆಗಿಂತ ನಿಮ್ಮ ಚಾರಿತ್ರ್ಯಕ್ಕೆ ಹೆಚ್ಚು ಗಮನ ಕೊಡಿ. ಚಾರಿತ್ರ್ಯ ಎಂದರೆ ನೀವು ಏನಾಗಿದ್ದೀರೋ ಅದು. ಪ್ರತಿಷ್ಠೆ ಎಂದರೆ ನಿಮ್ಮ ಬಗ್ಗೆ ಬೇರೆಯವರು ಏನು ತಿಳಿದುಕೊಂಡಿದ್ದಾರೋ ಅದು.

–ಜಾನ್ ವೂಡನ್

★ ಹೂವಿನ ಪರಿಮಳ ಗಾಳಿ ಬಂದ ದಿಕ್ಕಿಗೆ ಮಾತ್ರ ಪಸರಿಸುತ್ತದೆ. ಆದರೆ ಮನುಷ್ಯನ ಒಳ್ಳೆಯತನ ಎಲ್ಲ ದಿಕ್ಕುಗಳಲ್ಲೂ ಪಸರಿಸುತ್ತದೆ.

–ಚಾಣಕ್ಯ

★ ಬಹಳಷ್ಟು ಜನರು ತಮ್ಮ ಕನಸುಗಳನ್ನು ನನಸುಗೊಳಿಸಲು ವಿಫಲರಾಗುತ್ತಾರೆ. ಏಕೆಂದರೆ ಅವರು ಸಾಯಲು ಹೆದರುತ್ತಾರೆ.

–ಲೆಸ್ ಬ್ರೌನ್